ಕಂದಾಯ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ, ಜಲಸಂಪನ್ಮೂಲ ಇಲಾಖೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಿಸಿದ ೧೪ನೇ ವರದಿಯನ್ನು ಸಮಿತಿಯ ಪರವಾಗಿ ೧೩ನೇ ವಿಧಾನ ಸಭೆಯ ೧೫ನೇ ಅಧಿವೇಶನದಲ್ಲಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಶ್ರೀಮತಿ ಕಲ್ಪನಾ ಸಿದ್ಧರಾಜು (ಶ್ರೀಮತಿ ಸೀಮಾ ಅಶೋಕ್– ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಇವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ೨೦೧೧-೧೨ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ೨೮ ನೇ ವರದಿಯನ್ನು ಈ ಸಭೆಗೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಶ್ರೀ ಟಿ.ಬಿ.ಜಯಚಂದ್ರ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ):ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು, ಸಮಿತಿಯ ೨೦೧೧-೧೨ನೇ ಸಾಲಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ೧೩, ೧೭, ಹಾಗೂ ೧೮ನೇ ವರದಿಗಳನ್ನು ಸಮಿತಿಯ ಪರವಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:-ಮಂಡಿಸಲಾಯಿತು.

ಶ್ರೀ ಬಿ.ಸಿ.ನಾಗೇಶ್ (ಅಧ್ಯಕ್ಷರು,ಸರ್ಕಾರಿ ಭರವಸೆಗಳ ಸಮಿತಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು, ಸಮಿತಿಯ ೨೦೦೮-೦೯ನೇ ಸಾಲಿನ ಮೊದಲನೆಯ ವರದಿ, ೨೦೦೯-೧೦ನೇ ಸಾಲಿನ ಎರಡನೇ ವರದಿ ಹಾಗೂ ೨೦೧೦-೧೧ನೇ ಸಾಲಿನ ಮೂರನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:-ಮಂಡಿಸಲಾಯಿತು.

ಶ್ರೀ ಸಿ.ಸಿ.ಪಾಟೀಲ್ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ):- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಅಧ್ಯಕ್ಷನಾದ ನಾನು ,